# ಧರ್ಮವೇ ಜಯವೆಂಬ ದಿವ್ಯಮಂತ್ರ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru.
4. **Note:** Lyrics given without highlights are as per Ref. 1. The wordings in Ref. 2 are similar to Ref. 1. The wordings given in yellow highlights are as per Ref. 3.
5. **Note:** Singer has followed the lyrics as in Ref. 1 above.

| | |
|---|---|
| ರಾಗ: ಸಾವೇರಿ ತಾಳ: ಅಟ್ಟ | ರಾಗ: ಕಾಂಬೋಧಿ ತಾಳ: ಝಂಪೆ |
| | |
| ಧರ್ಮವೇ ಜಯವೆಂಬ ದಿವ್ಯಮಂತ್ರ \|\| ಪ \|\| | ಧರ್ಮವೇ ಜಯವೆಂಬ ದಿವ್ಯಮಂತ್ರ |
| ಮರ್ಮವನರಿತು ಮಾಡಲು ಬೇಕು ತಂತ್ರ \|\| ಅ.ಪ \|\| | ಮರ್ಮಗಳನೆತ್ತಿದರೆ ಒಳಿತಲಾ ಕೇಳಿ |
| | |
| ವಿಷವಿಕ್ಕಿದವನಿಗೆ ಷಡ್ರಸವನುಣಿಸಲುಬೇಕು | ವಿಷವನುಣಿಸಿದಗೆ ಷಡುರಸವನುಣಿಸಲು ಬೇಕು |
| ದ್ವೇಷ ಮಾಡಿದವನ ಪೋಷಿಸಲುಬೇಕು | ದ್ವೇಷ ಮಾಡುವನ ಪೋಷಿಸಲು ಬೇಕು |
| ಪುಸಿ ಮಾಡಿ ಕೆಡಿಸುವನ ಹಾಡಿ ಹರಸಲುಬೇಕು | ಹಸಿದು ಮನೆ ಕೊಂಬವನ ಹಾಡಿ ಹರಸಲು ಬೇಕು |
| ಮೋಸ ಮಾಡುವನ ಹೆಸರು ಮಗನಿಗಿಡಬೇಕು \|\| ೧ \|\| | ಅಸು ಹೀರಿದನ ಹೆಸರ ಮಗನಿಗಿಡಬೇಕು |
| | |
| ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು | ಹಿಂದೆ ನಿಂದಿಸುವರನು ವಂದಿಸುತಲಿರ ಬೇಕು |
| ಬಂಧನದೊಳಿಟ್ಟವರ ಬೆರೆಯಬೇಕು | ಬಂಧಿಸಿದವನ ಕೂಡ ಬೇರೆಯ ಬೇಕು |
| ಕೊಂದ ವೈರಿಯ ಮನೆಗೆ ನಡೆದು ಹೋಗಲುಬೇಕು | ನಿಂದ ನಿಲುವಿಗೆ ಸೇರದವನ ಪೊಗಳಲು ಬೇಕು |
| ಕುಂದೆಣಿಸುವವರ ಗೆಳೆತನ ಮಾಡಬೇಕು \|\| ೨ \|\| | ಕೊಂದವನ ಗೆಳೆತನ ಮಾಡಬೇಕಯ್ಯಾ |
| | |
| ಕೊಂಡೊಯ್ದು ಬಡಿಯುವರ ಕೊಂಡಾಡುತಿರಬೇಕು | ಕೊಂಡೊಯ್ದು ಕೆಡಿಸುವನ ಕೊಂಡಾಡುತಿರಬೇಕು |
| ಕಂಡು ಸಹಿಸದವರ ಕರೆಯಬೇಕು | ಕಂಡರಾಗದವರ ತಾ ಕರೆಯಬೇಕು |
| ಪುಂಡರೀಕಾಕ್ಷ ಶ್ರೀ ಪುರಂದರ ವಿಠ್ಠಲನ | ಪುಂಡರೀಕಾಕ್ಷ ಶ್ರೀ ಪುರಂದರ ವಿಠ್ಠಲನ |
| ಕೊಂಡಾಡಿ ತಾ ಧನ್ಯನಾಗಬೇಕು \|\| ೩ \|\| | ಅಖಂಡ ಮಹಿಮೆಯನ್ನರಿತು ನೆನೆಯಬೇಕಯ್ಯ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹರಿದಾಸರ ಧರ್ಮವೆಂದರೆ ಏನೆಂಬುದನ್ನು ದಾಸರು ಈ ಹಾಡಿನಲ್ಲಿ ಮನಸ್ಸಿಗೆ ನಾಟುವಂತೆ ವಿವರಿಸಿದ್ದಾರೆ.

ಸತ್ಪುರುಷನ ಮೂಲಭೂತ ಲಕ್ಷಣಗಳನ್ನು ಈ ಪದ ಮನಗಾಣಿಸುತ್ತದೆ. ವೈರದಿಂ ವೈರ ಶಮನವಾಗುವುದಿಲ್ಲ ಎಂಬುದನ್ನು ವಿವೇಕಿಗಳು ಬಲ್ಲರು, ನಮ್ಮ ಸುತ್ತ ವಿಷ ಜಂತುಗಳು ದ್ವೇಷಿಗಳು ಹುಸಿಗಾರರು ವಂಚಕರು ಬೆನ್ನ ಹಿಂದಾಡಿಕೊಳ್ಳುವವರು ಪೀಡಕರು ಅಸೂಯಾಪರರು ಇದ್ದಾರೆ ನಿಜ. ಅಂಥವರೊಂದಿಗೆ ಯಾವ ಬಗೆಯಲ್ಲಿ ಸ್ಪಂದಿಸಬೇಕು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. 'ಮೋಸ ಮಾಡಿದವನಿಗೆ ಮಗನ ಹೆಸರು ಇಡಬೇಕು' ಎಂಬ ಮಾತಂತೂ ಸಂಪನ್ನ ವ್ಯಕ್ತಿಯ ಸಹನಶೀಲತೆಯ ಶ್ರೇಷ್ಠ ಮಾದರಿಯಾಗಿ ನಿಲ್ಲುತ್ತದೆ.

**ಷಡ್ರಸ** – ಕಷಾಯ, ಮಧುರ, ಲವಣ, ಕಟು, ತಿಕ್ತ, ಆಮ್ಲ ಎಂಬ ಆರು ರಸಗಳು.

**ಮರ್ಮ** = ರಹಸ್ಯ, ಗುಟ್ಟು,

**ಎತು** = ಒತ್ತಿ ಹೇಳು

**Classification:** Keerthane
**Ankita:** sri purandara vittala
**Location:** NA
**Category:** Jeevana Sutra
**Sub-Category:** Vishnu, dharma, divya, mantra, jaya, visha, mosa, maga, shatru,
**Pravachana:** Sri. Varaha Hari Vittala Dasaru
**Explanation:** NA